

ಹೈದರಾಬಾದ್ ಕರ್ನಾಟಕ ಬರಹಗಾರರ ಸಾಹಿತ್ಯದ ಅಧ್ಯಯನಕ್ಕೆ ಪ್ರಶಸ್ತ ಸ್ಥಳ

ಹಾಗೂ ಲೇಖಕರೊಂದಿಗೆ ಗುಲಬರ್ಗಾ ವಿಶ್ವವಿದ್ಯಾಲಯ ಹೊಂದಿರುವ ನಂಟನ್ನು ನಾಡಿನ ಬೇರೆ ಯಾವ ವಿಶ್ವವಿದ್ಯಾಲಯವೂ ಹೊಂದಿಲ್ಲ. ಈ 'ಕನ್ನಡ ಪರಂಪರೆ'ಯನ್ನು ಮುಂದುವರೆಸಿಕೊಂಡೇ, 'ಸಾರಸ್ವತ ಮ್ಯೂಸಿಯಂ' ರೂಪಿಸುವ ಕೆಲಸ ಎಚ್. ಟಿ. ಪೋತೆ ಅವರಿಂದ ನಡೆದಿದೆ.

'ಕಲ್ಯಾಣ ಕರ್ನಾಟಕ ಭಾಗದ ಲೇಖಕರ ಕೃತಿಗಳನ್ನು ಒಳಗೊಂಡ ಗ್ರಂಥಾಲಯ ಹಾಗೂ ಬರಹಗಾರರ ಭಾವಚಿತ್ರಗಳ ಸಂಗ್ರಹಾಲಯ'ವು ಕನ್ನಡ ಅಧ್ಯಯನ ಸಂಸ್ಥೆಯ ಪ್ರತ್ಯೇಕ ಕೊಠಡಿಯಲ್ಲಿ ಸುಸಜ್ಜಿತವಾಗಿ ರೂಪುಗೊಂಡಿದೆ. ಸಹೃದಯರು ಕನ್ನಡ ಅಧ್ಯಯನ ಸಂಸ್ಥೆಯನ್ನು ಪ್ರವೇಶಿಸಿದರೆ ಮೊದಲಿಗೆ ಎದುರುಗೊಳ್ಳುವುದು ಕುವೆಂಪು, ಬೇಂದ್ರೆ, ರವೀಂದ್ರನಾಥ್ ಟ್ಯಾಗೋರ್, ಗಾಂಧಿ, ಅಂಬೇಡ್ಕರ್, ಬುದ್ಧ, ಬಸವ, ಕನಕ, ಸಾವಿತ್ರಿಬಾಯಿ ಫುಲೆ ಅವರ ಪ್ರತಿಮೆಗಳು. ಕನ್ನಡ ಹಾಗೂ ಕನ್ನಡವನ್ನೊಳಗೊಂಡ ಭಾರತದ ವಿವೇಕವು ಅಲ್ಲಿ ನಮ್ಮನ್ನು ಸ್ವಾಗತಿಸುತ್ತದೆ. ಎಡಗಡೆಗೆ ಮೆಟ್ಟಿಲು ಹತ್ತಿ ಎರಡು ಹೆಜ್ಜೆ ನಡೆದರೆ, ಕಲ್ಯಾಣ ಕರ್ನಾಟಕದ ಗ್ರಂಥಾಲಯ ಭಾವಚಿತ್ರ ಭವನ ಕಾಣುತ್ತದೆ. ಅಲ್ಲಿ ಅನಾವರಣಗೊಂಡಿರುವ ಲೇಖಕರ ಭಾವಚಿತ್ರಗಳು ಕನ್ನಡದ ಸಾಕ್ಷಿಪ್ರಜ್ಞೆಯಂತೆ ಕಾಣಿಸುತ್ತವೆ. ನಾಡಿನ ವಿದ್ವಾಂಸರು, ಸಂಶೋಧಕರುಗಳ ಭಾವಚಿತ್ರಗಳು ನೋಡುಗರ ಗಮನಸೆಳೆಯುತ್ತವೆ. ಶಾಂತರಸ, ಚೆನ್ನಣ್ಣ ವಾಲೀಕಾರ, ಗೀತಾ ನಾಗಭೂಷಣ, ಸಿದ್ದಯ್ಯ ಪುರಾಣಿಕ, ಬಿ. ಶ್ಯಾಮಸುಂದರ್, ಬೋಳ ಬಂಡೆಪ್ಪ ಸೇರಿದಂತೆ ಸಮಕಾಲೀನ ಬರಹಗಾರರಾದ ಮಲ್ಲಿಕಾ ಘಂಟಿ, ಮಹಾಂತೇಶ ನವಲಕಲ್, ವಿಕ್ರಂ ವಿಸಾಜಿ, ಸೂರ್ಯಕಾಂತ್ ಸುಜ್ಯಾತ್, ಅಮೃತಾ ಕಟಕೆ, ಎ.ಕೆ. ರಾಮೇಶ್ವರ, ಲಲಿತಾ ನಾಯಕ, ಲಿಂಗಣ್ಣ ಸತ್ಯಂಪೇಟೆ, ಜಯದೇವಿತಾಯಿ ಲಿಗಾಡೆ, ಅಲ್ಲಮಪ್ರಭು ಬೆಟ್ಟದೂರ, ಕುಂವೀ, ವಸುಧೇಂದ್ರ ಸೇರಿದಂತೆ ಕಲ್ಯಾಣ ಕರ್ನಾಟಕದ ನೂರಾರು ಲೇಖಕರು ಹಾಗೂ ಅವರ ಸಾವಿರಾರು ಕೃತಿಗಳನ್ನು ಅಲ್ಲಿ ಕಾಣಬಹುದು. ಕನ್ನಡ ಅಧ್ಯಯನ ಸಂಸ್ಥೆ ತಾನು ಸಂಗ್ರಹಿಸಿರುವ ಕಲ್ಯಾಣ ಕರ್ನಾಟಕದ ಲೇಖಕರ ಕುರಿತ ಮಾಹಿತಿಯನ್ನು ಜಾಲತಾಣಕ್ಕೆ ಅಳವಡಿಸಿದೆ. ಸದ್ಯದಲ್ಲೇ ಆ ವೆಬ್‌ಸೈಟ್ ಲೋಕಾರ್ಪಣೆಗೊಳ್ಳಲಿದೆ.

ಸುವರ್ಣಮಹೋತ್ಸವದ ಅಂಗವಾಗಿ ಗುಲಬರ್ಗಾ ವಿಶ್ವವಿದ್ಯಾಲಯ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. 'ದಲಿತ ವಿಷಯ ವಿಶ್ವಕೋಶ', 'ಅಂಬೇಡ್ಕರ್ ವಿಷಯ ವಿಶ್ವಕೋಶ', 'ಕರ್ನಾಟಕದ ಬೌದ್ಧ ಕೇಂದ್ರಗಳ ಸಚಿತ್ರ ಪುಸ್ತಕಗಳು' ಮುದ್ರಣದ ಅಂತಿಮ ಹಂತದಲ್ಲಿವೆ. ದಲಿತ ಸಾಹಿತ್ಯದ 5 ಸಂಪುಟಗಳು, ಹೈದ್ರಾಬಾದ್ ಕರ್ನಾಟಕದ ವಿಮೋಚನಾ ಹೋರಾಟಗಾರರ ಮಾಲೆ, ಶರಣ ಸಾಹಿತ್ಯ ಸಂಪುಟಗಳು, ಬೌದ್ಧ ಸಾಹಿತ್ಯ ಸಂಪುಟಗಳು, ಹೈ.ಕ.ದ ಸಾಂಸ್ಕೃತಿಕ ವಿಷಯ ವಿಶ್ವಕೋಶ ಈಗಾಗಲೇ ಪ್ರಕಟವಾಗಿವೆ.

ವಿಶ್ವವಿದ್ಯಾಲಯದಲ್ಲಿನ ಕನ್ನಡದ ವಿದ್ಯಾರ್ಥಿಗಳಿಗೆ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಕೂಡ ಗಮನ ಸೆಳೆಯುತ್ತದೆ. ತಂತ್ರಜ್ಞಾನವನ್ನು ಭಾಷಾ ಬೆಳವಣಿಗೆ ಹಾಗೂ ಅಧ್ಯಯನಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಂಡಿರುವುದು ಗಮನಸೆಳೆಯುತ್ತದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ 'ಕನ್ನಡ ಕಟ್ಟುವ ಕೆಲಸ' ಇತರ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಮಾದರಿಯಾದುದು. ಆಯಾ ಭಾಗದ ಲೇಖಕರ ವಿವರ ಹಾಗೂ ಅವರ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವ ಕೆಲಸ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸಾಹಿತ್ಯದ ಬೆಳವಣಿಗೆಗೂ ಅನುಕೂಲಕರ.

ಪ್ರತಿಕ್ರಿಯಿಸಿ: feedback@sudha.co.in


SANDHILIN सन्धिलिन
ಸಂಧಿಲಿನ್

ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!

ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM™ AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ